ಸಂಪುಟ 59 | ಸಂಚಿಕೆ 198 | ಪುಟ 12+6

epaper.samyukthakarnataka.com

ಮಂಗಳೂರು | ಹುಬ್ಬಳ್ಳಿ | ಕಲಬುರಗಿ | ಬೆಂಗಳೂರು | ದಾವಣ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

ಭಾನುವಾರ 13 | ಆಗಸ್ಟ್-2017 | ₹5-00

Sahyadri College of Engineering & Management
CENTRAL LIBRARY
Mangaluru-7



ಅಮೃತ್‌ಸರ್‌ನ ಸ್ವರ್ಣ ಮಂದಿರಕ್ಕೆ ಶನಿವಾರ ಬಾಲಿವುಡ್ ನಟಿ ಹುಮಾ ಸಲೀಂ ಖುರೇಶಿ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಇಂದಿನ ಸಂಚಿಕೆಯೊಂದಿಗೆ 'ಸಾಪ್ತಾಹಿಕ ಸೌರಭ' ಪುರವಣಿ

## ಪೆಸೆಟ್ ಇಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕ ಬಂಧನ



**ಶಿವಮೊಗ್ಗ:** ಮಂಗಳೂರಿನ ಇಂಜಿನಿಯರಿಂಗ್ ಕಾಲೇಜ್‌ವೊಂದಕ್ಕೆ ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಪ್ರತಿಷ್ಠಿತ ಪಿಇಎಸ್‌ಐಟಿಎಂ (ಪೆಸೆಟ್) ಇಂಜಿನಿಯರಿಂಗ್ ಕಾಲೇಜ್‌ನ ಪ್ರಾಧ್ಯಾಪಕನನ್ನು ಮಂಗಳೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಲೇಜಿನ ಕಂಪ್ಯೂಟರ್ ವಿಭಾಗದ ಡಾ.ಎ.ಪಿ. ಮನು ಬಂಧಿತ ಪ್ರಾಧ್ಯಾಪಕ. ಮಂಗಳೂರು ಅಡ್ಯಾರನಲ್ಲಿರುವ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಪ್ರಾಚಾರ್ಯ ಡಾ. ಉಮೇಶ್ ಎಂ. ಭೂಷಿ ಈ ಕುರಿತು ಪೊಲೀಸರಿಗೆ ದೂರು ನೀಡಿದ್ದರು.

**ಆರೋಪವೇನು?**

ಎ.ಪಿ. ಮನು ಮಂಗಳೂರು ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ 2009 ಆಗಸ್ಟ್ 17ರಿಂದ ಇನ್‌ಫಾರ್‌ಮೇಶನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಣೆ ಮಾಡುತ್ತಿದ್ದರು.

ಈ ಕಾಲೇಜು ಅಲಹಾಬಾದ್ ಐಐಟಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇದರ ವಿಚಾರ ತಿಳಿದ ಎ.ಪಿ. ಮನು 28-11-2009ರಂದು ಐಐಟಿ ಅಲಹಬಾದ್‌ನಲ್ಲಿ ಪಿಹೆಚ್‌ಡಿ ಮಾಡಲು ಪ್ರಾಯೋಜಕತ್ವ ಹಾಗೂ ಬಿಡುಗಡೆ ಆದೇಶ ನೀಡುವಂತೆ ಕಾಲೇಜಿಗೆ ಕೋರಿಕೊಂಡಿದ್ದರು.

ಅದರಂತೆ ಕಾಲೇಜಿನ ಪ್ರಾಂಶುಪಾಲರು ಎ.ಪಿ. ಮನುರವರಿಗೆ ಷರತ್ತುಬದ್ಧ ಪ್ರಾಯೋಜಕತ್ವ ಪತ್ರ ಹಾಗೂ ಬಿಡುಗಡೆ ಆದೇಶ ನೀಡಿದ್ದರು. ಜೊತೆಗೆ 3 ಲಕ್ಷ ರೂ. ಆರ್ಥಿಕ ಸಹಾಯ ಕೂಡ ಸಂಸ್ಥೆ ವತಿಯಿಂದ ನೀಡಲಾಗಿತ್ತು. 2-12-2009ರಂದು ಎ.ಪಿ. ಮನು ಕಾಲೇಜ್‌ನಿಂದ ಬಿಡುಗಡೆಗೊಂಡಿದ್ದರು.

19-10-2012ರಂದು ಆಪಾದಿತರ ಕೋರಿಕೆಯ ಮೇರೆಗೆ ಮತ್ತೆ 4.50 ಲಕ್ಷ ರೂ.ಗಳನ್ನು ಎ.ಪಿ. ಮನುಗೆ ವೈಯಕ್ತಿಕ ಸಾಲವಾಗಿ ಸಂಸ್ಥೆ ನೀಡಿತ್ತು. ಪಿಹೆಚ್‌ಡಿ ವ್ಯಾಸಂಗ ಪೂರೈಸಿ 19-10-2012ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು.

ಪಿಹೆಚ್‌ಡಿ ಪದವಿ ನಂತರ ಏಳೆಂಟು ತಿಂಗಳ ಕಾಲಾವಧಿಯ ಮಧ್ಯದಲ್ಲಿ ಉದ್ಯೋಗ ಬಿಟ್ಟಲ್ಲಿ ಸಂಸ್ಥೆಯಿಂದ ಪಡೆದುಕೊಂಡಿರುವ ಎಲ್ಲ ಹಣವನ್ನು ವಾಣಿಜ್ಯ ಬ್ಯಾಂಕ್‌ನಲ್ಲಿ ಬಡ್ಡಿಗೆ ಅನುಸಾರವಾಗಿ ಹಿಂತಿರುಗಿಸುವುದಾಗಿ ಒಪ್ಪಂದ ಮಾಡಿಕೊಂಡಿದ್ದರು. ಈ ನಡುವೆ 17-8-2016ರಂದು ಎ.ಪಿ. ಮನು ಸಂಸ್ಥೆಗೆ ಪತ್ರ ಬರೆದು ಬಿಡುಗಡೆಗೊಳಿಸುವಂತೆ ಕೋರಿಕೊಂಡಿದ್ದರು. ಜೊತೆಗೆ ಈ-ಮೇಲ್ ಮೂಲಕವೂ ಇದೇ ಕೋರಿಕೆಯನ್ನು ಸಂಸ್ಥೆಗೆ ರವಾನಿಸಿದ್ದರು.

ಎ.ಪಿ.ಮನುರವರು ಮಾಡಿಕೊಂಡಿದ್ದ ಕರಾರು ಪತ್ರದಂತೆ 35,65,166 ರೂ.ಗಳನ್ನು ಸಂಸ್ಥೆಗೆ ಸಂದಾಯ ಮಾಡಬೇಕಾಗಿತ್ತು. ಆದರೆ ಈ ಹಣ ಸಂದಾಯ ಮಾಡದೆ, ಏಕಾಏಕಿ ಉದ್ಯೋಗ ತೊರೆದು ಕರಾರು ಉಲ್ಲಂಘಿಸಿ ನಂಬಿಕೆ ದ್ರೋಹ ಹಾಗೂ ವಂಚನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.